**FDP No.3/2017**
**RW-1.**

<u>ದಿನಾಂಕಃ **14.08.2025.**</u>

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಸ್ ಕೆ ವಕೀಲರಿಂದಃ</u>

ಈ ಅರ್ಜಿಯನ್ನು ಚನ್ನಬಸಪ್ಪ ರವರು ನನ್ನ ಉಳಿದ ಅಣ್ಣ-ತಮ್ಮಂದಿರ ವಿರುದ್ಧ ದಾಖಲಿಸಿದ್ದಾರೆ. ಯಾವಾಗ ದಾಖಲಿಸಿದ್ದಾರೆ ಎಂದರೆ ಸಾಕ್ಷಿಯು ಈಗ ಒಂದು ವರ್ಷದ ಹಿಂದೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ಯಾದಗಿರಿಯಲ್ಲಿ ಇರುವ ಆಸ್ತಿಗಳಿಗೆ ಸಂಬಂಧಿಸಿದಂತೆ ಅರ್ಜಿ ದಾಖಲು ಮಾಡಿದ್ದಾರೆ. ದಾವೆಯಲ್ಲಿ ನಿಮ್ಮನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಸರಿ, ನನಗೆ ಗೊತ್ತಾದ ನಂತರ ನಾನು ಸೇರ್ಪಡೆ ಗೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಒಂದು ವರ್ಷದ ಒಳಗೆ ನನಗೆ ಗೊತ್ತಾಗಿರುತ್ತದೆ. ಹೇಗೆ ಗೊತ್ತಾಗಿದೆ ಎಂದರೆ ಸಾಕ್ಷಿಯು ಮನೆಯಲ್ಲಿ ಮಾತನಾಡುವುದನ್ನು ಕೇಳಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಚನ್ನಬಸಪ್ಪ ರವರ ಮಕ್ಕಳು ಹಾಗೂ 1 ನೇ ಎದುರುದಾರ ಚಂದ್ರಶೇಖರ ರವರು ಮಾತನಾಡುವುದನ್ನು ಕೇಳಿರುತ್ತೇನೆ.

2. ಈಗ 20 ವರ್ಷಗಳ ಹಿಂದೆ ನಾನು ಈ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಸಹೋದರರ ವಿರುದ್ಧ ಒಂದು ದಾವೆ ದಾಖಲಿಸಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಯಾದಗಿರಿಯ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯದ ಅಸಲು ದಾವಾ ನಂ.79/2004 ರ ವಾದ ಪತ್ರದ ದೃಢೀಕೃತ ನಕಲು ಪ್ರತಿಯನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆ ಎಂದರೆ ಸಾಕ್ಷಿಯು ಅದು ನನ್ನ ಸಹಿ ಅಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯನ್ನು ನಾನು ನನ್ನ ತಾಯಿ ಹಾಗೂ ಸಹೋದರ-ಸಹೋದರಿಯರ ವಿರುದ್ಧ ಪಾಲು ವಿಭಾಗಕ್ಕಾಗಿ ದಾಖಲು ಮಾಡಿದ್ದೆನು ಎಂದರೆ ಸರಿಯಲ್ಲ. ಸದರಿ ದಾವೆ ವಾಜಾ ಆಗಿದೆ ಎಂದರೆ ಸಾಕ್ಷಿಯು ನಾನು ದಾವೆ ದಾಖಲು ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನನ್ನ ಸಹೋದರರು ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ನಂತರ ನೀವು ನ್ಯಾಯಾಲಯದ ಹೊರಗೆ ರಾಜಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ದಾವೆ ವಜಾ ಆಗಿದೆ ಎಂದರೆ ಸಾಕ್ಷಿಯು ನಾನು ಆ ರೀತಿ ಹಿಂದೆ ದಾವೆ ಹಾಕಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆ ದಾಖಲು ಮಾಡಿರುವ

ಬಗ್ಗೆ ಮಾಹಿತಿ ಇದ್ದರೂ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಗೆ ದಿನಾಂಕ 29.06.2020 ರಂದು ಅವರ ಪರವಾಗಿ ಶ್ರೀ ಎಂ.ಬಿ ಪಾಟೀಲ ವಕೀಲರು ಸಲ್ಲಿಸಿದ ವಕಾಲತನಲ್ಲಿನ ಅವರ ಸಹಿಯನ್ನು ತೋರಿಸಲಾಗಿ ಸಾಕ್ಷಿಯು ಅದು ತಮ್ಮ ಸಹಿ ಆಗಿರುತ್ತದೆ ಎಂದು ಒಪ್ಪಿ ಕೊಂಡಿರುತ್ತಾರೆ. ವಕಾಲತನಲ್ಲಿನ ಸದರಿ ನನ್ನ ಸಹಿ ಮತ್ತು ಅಸಲು ದಾವಾ ನಂ.79/2004 ರಲ್ಲಿನ ವಾದಿಯ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3. ನಾನು ಈ ಅರ್ಜಿಯಲ್ಲಿ ಹಾಜರಾಗಿ ವಾಡಿಯಲ್ಲಿ ಇರುವ ಆಸ್ತಿಗಳನ್ನು ಸೇರ್ಪಡೆ ಮಾಡುವಂತೆ ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ. ಅದಕ್ಕೆ ಅರ್ಜಿದಾರರು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ನಂತರ ಸದರಿ ಅರ್ಜಿಯನ್ನು ದಿಃ 02.02.2023 ರಂದು ವಜಾ ಮಾಡಲಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ ನಮಗೆ ವಾಡಿಯಲ್ಲಿ ಇರುವ ಆಸ್ತಿಗಳಲ್ಲಿ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರನ ಮಾತು ಕೇಳಿ ದುರುದ್ದೇಶದಿಂದ ಈ ಅರ್ಜಿಯಲ್ಲಿ ಸೇರ್ಪಡೆಗೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾಡಿಯಲ್ಲಿ ಇರುವ ಆಸ್ತಿಗಳು ಹಿರಿಯರ ಆಸ್ತಿಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜಂಟಿ ಕುಟುಂಬದಲ್ಲಿ ಇದ್ದಾಗ ಅವುಗಳನ್ನು ಖರೀದಿ ಮಾಡಲಾಗಿದೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಜಂಟಿ ಕುಟುಂಬದ ಸದಸ್ಯರು ತಮ್ಮ ಜಂಟಿ ಆದಾಯದಿಂದ ಸದರಿ ವಾಡಿಯಲ್ಲಿನ ಆಸ್ತಿಗಳನ್ನು ಖರೀದಿ ಮಾಡಿದ್ದರು. ನನ್ನ ಸಹೋದರರಾದ ಸಂಗಪ್ಪ ಹಾಗೂ 1 ನೇ ಎದುರುದಾರ KSRTC ಯಲ್ಲಿ ಹಾಗೂ ಮೃತ ಚನ್ನಬಸಪ್ಪ ಮತ್ತು ಈಶ್ವರಪ್ಪ ರವರು ACC ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಸದರಿಯವರು ತಮ್ಮ ಜಂಟಿ ಆದಾಯದಲ್ಲಿ ವಾಡಿಯಲ್ಲಿ ಆಸ್ತಿ ಖರೀದಿ ಮಾಡಿದ್ದಾರೆ ಎಂದು ನಿಮ್ಮ ತಕರಾರು ಅರ್ಜಿಯಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಬರೆಸಿದ್ದೆನೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಬರೆಸಿಲ್ಲ, ಸದರಿ ಆಸ್ತಿಯನ್ನು ಈಶ್ವರಪ್ಪ ರವರ ಹೆಂಡತಿ ಶಾಂತಾಬಾಯಿ ತಮ್ಮ ಸ್ವಂತ ಆದಾಯದ ಖರೀದಿ ಮಾಡಿದ್ದರು ಎಂದರೆ ಸರಿಯಲ್ಲ. ಜಂಟಿ ಆದಾಯದಿಂದ ಖರೀದಿ ಮಾಡಿರುವುದಾಗಿ ಖರೀದಿ ಪತ್ರದಲ್ಲಿ ನಮೂದಿಸಲಾಗಿದೆಯೇಎಂದರೆ ಸಾಕ್ಷಿಯು ಬರೆದಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಶಾಂತಬಾಯಿ ರವರ ಸ್ವಯಾರ್ಜಿತ ಆಸ್ತಿಯಾಗಿದ್ದು ಉಳಿದವರಿಗೆ ಅದರಲ್ಲಿ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಹಾಜರು ಪಡಿಸಿದ ಎಲ್ಲಾ ದಾಖಲೆಗಳನ್ನು ಸ್ವತಃ ನಾನೇ ಪಡೆದುಕೊಂಡು ಹಾಜರು ಮಾಡಿದ್ದೇನೆ. ನಿಆರ್-3 ರ ವಂಶವೃಕ್ಷದ ದೃಡೀಕರಣ ಪತ್ರದ ನಕಲು ಪ್ರತಿಯನ್ನು 1 ನೇ ಎದುರುದಾರ ಪಡೆದುಕೊಂಡಿದ್ದಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಈ ಹಿಂದಿನ ದಾವೆಗಳ ದೃಡೀಕೃತ ನಕಲು ಪ್ರತಿಗಳನ್ನು ಸಹ 1 ನೇ ಎದುರುದಾರರೇ ತೆಗೆಸಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ಪಾಲು ಕೊಡಬಾರದು ಎಂಬ ಉದ್ದೇಶದಿಂದ 1 ನೇ ಎದುರುದಾರ ನಮ್ಮ ಮೂಲಕ ಸುಳ್ಳು ತಕರಾರು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರ ಮಾತು ಕೇಳಿ ಸುಳ್ಳು ತಕರಾರು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

5. ಈ ಅರ್ಜಿಯಲ್ಲಿನ ದಿಃ 02.02.2023 ರ ಮಧ್ಯಂತರ ಆದೇಶದ ವಿರುದ್ಧ ನಾವು ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿ. ವಾಡಿಯಲ್ಲಿನ ಆಸ್ತಿಯ ನಂಬರು ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ನಂ.6-20-2 ಇರುತ್ತದೆ ಎಂದರೆ ಸರಿ. ಅದನ್ನು ಶಾಂತಾಬಾಯಿ ರವರು ಖರೀದಿಸಿದ್ದಾರೆ ಎಂದರೆ ಸಾಕ್ಷಿಯು ನನ್ನ ತಂದೆಯ ಆಸ್ತಿಯಿಂದಲೇ ಖರೀದಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ನಿವೇಶನ ಹಾಗೂ ಯಾದಗಿಯಲ್ಲಿ ಮನೆಗಳನ್ನು ಹೊಂದಿದ್ದರು. ಈಶ್ವರಪ್ಪ ಹಾಗೂ ಶಾಂತಾಬಾಯಿ ರವರಿಗೆ ಯಾವುದೇ ಸಾಂತಾನ ಇಲ್ಲ ಎಂದರೆ ಸರಿ. ವಾಡಿಯಲ್ಲಿ ಇರುವ ಆಸ್ತಿಯಲ್ಲಿ ಅಂಬಾಭವಾನಿ ದೇವಸ್ಥಾನ ಇದೆ ಎಂದರೆ ಸರಿ. ಈಶ್ವರಪ್ಪ ಹಾಗೂ ಶಾಂತಾಬಾಯಿ ವಾಡಿಯಲ್ಲಿನ ಆಸ್ತಿಯನ್ನು ಸದರಿ ದೇವಸ್ಥಾನಕ್ಕೆ ಬಿಟ್ಟುಕೊಡುವ ಉದ್ದೇಶ ಹೊಂದಿದ್ದರು ಎಂದರೆ ಸರಿಯಲ್ಲ. ಸದರಿಯವರು ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಸದರಿ ಆಸ್ತಿ ಖಾತೆ ವರ್ಗಾವಣೆ ಆಗಿತ್ತು ಎಂದರೆ ಸರಿ. 1998 ರಲ್ಲಿ ನಾನು ಹಾಗೂ ನಮ್ಮ ಕುಟುಂಬದ ಎಲ್ಲಾ ಸದಸ್ಯರು ಸೇರಿ ಸದರಿ ವಾಡಿಯಲ್ಲಿನ ಆಸ್ತಿಯನ್ನು ಸಿಂದಗಿ ಅಂಬಾ ಮಹಾಂಕಾಳಿ ದೇವರ ಭಕ್ತನಾದ ಬಾಬುರಾವ್ ಪೂಜಾರಿ ರವರಿಗೆ ದಾನ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಗಳು ದಾನ ಪತ್ರ ಬರೆದುಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಆ ಪ್ರಕಾರ ಆಸ್ತಿ ಗುಡಿ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ನಂತರ 2001 ರಲ್ಲಿ ತಮಗೆ ದೇವಸ್ಥಾನ ನಡೆಸಲು ಆಗುವುದಿಲ್ಲ ಎಂದು ಬಾಬುರಾವ್ ರವರು ಆಸ್ತಿಯನ್ನು ಚನ್ನಬಸಪ್ಪ ರವರಿಗೆ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಚನ್ನಬಸಪ್ಪ ರವರ ಹೆಸರಿಗೆ ಪಂಚಾಯಿತಿ ಖಾತಾ ವರ್ಗಾವಣೆ

ಆಗಿರುತ್ತದೆ ಎಂದರೆ ಸರಿಯಲ್ಲ. ಚನ್ನಬಸಪ್ಪ ರವರು ತಮ್ಮ ಜೀವಿತಾವದಿಯಲ್ಲಿ ಹೊಸ ದೇವಸ್ಥಾನ ಕಟ್ಟಿಸಿದ್ದಾರೆ ಎಂದರೆ ಸಾಕ್ಷಿಯು ದೇವಸ್ಥಾನ ಇದೆ ಆದರೆ ಅದನ್ನು ಚನ್ನಬಸಪ್ಪ ಕಟ್ಟಿಸಿಲ್ಲ ಎಂದು ನುಡಿಯುತ್ತಾರೆ. ಅವರ ಕಾಲದಲ್ಲಿಯೇ ದೇವಸ್ಥಾನ ಆಗಿದ್ದರೂ ಸಹ ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಂತರ ಚನ್ನಬಸಪ್ಪ ರವರಿಗೆ ವಯಸ್ಸಾದ ಕಾರಣ ತಮ್ಮ ಮಗ ಅಮರೇಶ ರವರಿಗೆ ನೊಂದಾಯಿತ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಕಾರ ಅಂಬರೇಶ ರವರ ಹೆಸರಿಗೆ ಹಕ್ಕು ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ನಂತರ ಅಮರೇಶ ರವರು ತನ್ನ ತಾಯಿ ವೀರಮ್ಮ ರವರಿಗೆ ದಾನ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಅದೆಲ್ಲ ಸುಳ್ಳು ಎಂದು ನುಡಿಯುತ್ತಾರೆ. ಈಗ ದೇವಸ್ಥಾನವನ್ನು ವೀರಮ್ಮ ರವರೇ ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆದರೆ ಸರಿಯಲ್ಲ. ಸದರಿ ಆಸ್ತಿ ಈಗ ವೀರಮ್ಮ ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿಯು ಅದೆಲ್ಲ ಸುಳ್ಳು ನಾವು ಯಾವುದೇ ಸಹಿ ಮಾಡಿಕೊಟ್ಟಿಲ್ಲಎಂದು ನುಡಿಯುತ್ತಾರೆ. ಬಾಬುರಾವ್, ಚನ್ನಬಸಪ್ಪ, ಅಮರೇಶ ಹಾಗೂ ವೀರಮ್ಮ ರಚವರ ಹೆಸರಿಗೆ ಆಗಿರುವ ದಾನ ಪತ್ರಗಳನ್ನು ನಾವು ಎಲ್ಲಿಯೂ ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಕೇವಲ 8-10 ತಿಂಗಳ ಹಿಂದೆ ಸದರಿ ವಿಷಯ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. 8-10 ತಿಂಗಳ ಹಿಂದೆ ಗೊತ್ತಾಗಿದೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

6. ವಾಡಿಯಲ್ಲಿನ 8-73/1 ನ ಖುಲ್ಲಾ ಜಾಗ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ತಂದೆಯ ಮೂರು ಲಾರಿಗಳನ್ನು ಮಾರಾಟ ಮಾಡಿ ಬಂದ ಹಣದಿಂದ ನನ್ನ ತಾಯಿ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸರಿದ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿಲ್ಲಎಂದರೆ ಸರಿ. ನಾನು ಈಗ ಆ ರೀತಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಚನ್ನಬಸಪ್ಪ 1995 ರಲ್ಲಿ ಸೈಯಾದ್ ಇಕ್ಬಾಲ್ ಹುಸೇನಿ ರವರಿಗೆ ಖರೀದಿ ಮಾಡಿದ್ದು, ಆತನ ಸ್ವಯಾರ್ಜಿತ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೂ ನಮಗೂ ಸಂಬಂಧ ಇಲ್ಲದಿದ್ದರೂ ಸದರಲ್ಲಿ ಪಾಲು ಇದೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ. ವಾಡಿಯಲ್ಲಿ ಇರುವ ಆಸ್ತಿಯಲ್ಲಿ ನನಗೆ ಮತ್ತು ಉಳಿದ ಎದುರುದಾರರಿಗೆ ಯಾವುದೇ ಹಕ್ಕು ಇಲ್ಲದಿದ್ದರೂ 1 ನೇ ಎದುರುದಾರನ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ **1** ರಿಂದ **5** ನೇ ಎದುರುದಾರರ ಪರ ಶ್ರೀ ಡಿ.ಎಂ ವಕೀಲರಿಂದಃ

ಯಾದಗಿರಿ ಹಾಗೂ ವಾಡಿಯಲ್ಲಿನ ಆಸ್ತಿಗಳು ಜಂಟಿ ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಎಲ್ಲರಿಗೂ ಸಮಪಾಲು ಇದೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ